
ಕಾಲದಲ್ಲೂ ನಾವು ಹೀಗೆ ಇರ್ತೀವಿ ಅನ್ನೋ ಭ್ರಮೆಯಲ್ಲೇ ಬದುಕ್ತಾರೆ. ವಯಸ್ಸು ಆಗ್ತಿದ್ದಂಗೆ, ದೇಹ ದುರ್ಬಲವಾದಂತೆಲ್ಲ ಸುಖ ಅಂತ ಅಂದುಕೊಂಡಿದ್ದು ಸುಖ ಅಲ್ಲ ಅನ್ನೋದು ಗೊತ್ತಾಗುತ್ತೆ. ಅಷ್ಟೊತ್ತಿಗೆ ಕಾಲ ಮೀರಿ ಹೋಗಿರುತ್ತೆ. ಅವರಿಗೆ ಆಗಿದ್ದೂ ಅದೇ. ತಮ್ಮ ನಡವಳಿಕೆಗಳಿಂದ ಹೆಂಡತಿಗೆ ನೋವಾಗುತ್ತೆ. ಮಗನ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತೆ ಅಂತ ಅವರು ಯೋಚಿಸಲಿಲ್ಲ. ಸಮಾಜ ಏನು ಹೇಳುತ್ತೆ ಅನ್ನೋದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಸುಖ ಸಿಕ್ಕಿದೆ, ಅದನ್ನು ಅನುಭವಿಸಿ ಬಿಡಬೇಕು ಅನ್ನೋ ಆತುರದಲ್ಲಿದ್ದರು. ಈ ಕ್ಷಣಕ್ಕೆ ಇದೇ ಮುಖ್ಯ ಅನ್ನೋ ಮನಃಸ್ಥಿತಿಯಲ್ಲೇ ಬದುಕಿದ್ದರು.



ಅವರ ಜತೆ ಇದ್ದ ಹೆಂಗಸಿನ ಗಂಡ, ಮಗ ಮನೆಯಿಂದ ಹೊರಕ್ಕೆ ದಬ್ಬಿದರಲ್ಲ, ಆ ಕ್ಷಣದಲ್ಲಿ ಅವರಿಗೆ ವಾಸ್ತವ ಅರ್ಥವಾಗಿರುತ್ತೆ. ಆಮೇಲೆ ಸುಖ ಹುಡುಕಿಕೊಂಡು ಹೋಗಲಿಲ್ಲ. ಹೋಗಿದ್ದರೆ ಸಿಗುತ್ತಿತ್ತೇನೊ. ಸಿಕ್ಕಿದ್ದರೂ ಅದನ್ನು ನಿಭಾಯಿಸುವ ಶಕ್ತಿ ಅವರಲ್ಲಿ ಇರಲಿಲ್ಲ. ತಪ್ಪು ಮಾಡಿದೆ ಅಂತ ಅವರಿಗೆ ಒಂದೇ ಒಂದು ಕ್ಷಣವೂ ಅನ್ನಿಸಲಿಲ್ಲ. ಸೊಸೆ, ಮೊಮ್ಮಗುವನ್ನು ನೋಡಬೇಕು ಅಂತಲೂ ಅನ್ನಿಸಲಿಲ್ಲ! ಅಂಥ ನಿರ್ಲಿಪ್ತ ಮನಃಸ್ಥಿತಿ ಬೆಳೆಸಿಕೊಳ್ಳೋದು ಕಷ್ಟ ಸಾರ್. ಪೂರ್ವಾಶ್ರಮದ ವ್ಯಾಮೋಹಗಳಿಂದ ಬಿಡಿಸಿಕೊಳ್ಳಲೇ ಬೇಕಾದ ಅನಿವಾರ್ಯತೆ ಇರೋ ಸನ್ಯಾಸಿಗೂ ಅಂಥ ಮನಃಸ್ಥಿತಿ ಬೆಳೆಸಿಕೊಳ್ಳೋದು ಸಾಧ್ಯವಿಲ್ಲ ಅನ್ಸುತ್ತೆ. ಅಮ್ಮ ಮಾತ್ರ ತನ್ನ ಗಂಡ ಬದಲಾಗಬಹುದು ಅನ್ನೋ ನಿರೀಕ್ಷೆ ಇಟ್ಟುಕೊಂಡಿದ್ದರು. ಅವರ ಕೆಟ್ಟ ನಡವಳಿಕೆ ಬಗ್ಗೆ ಅಮ್ಮ ಒಂದೇ ಒಂದು ಆಕ್ಷೇಪಣೆಯ ಮಾತೂ ಆಡಲಿಲ್ಲ. ಇಬ್ಬರೂ ಒಟ್ಟಿಗೆ ಓದಿದವರು. ಅಮ್ಮ ನಂಜನಗೂಡು ಹತ್ತಿರದ ಹಳ್ಳಿಯವರು. ಅವರದು ಅರ್ಚಕರ ಕುಟುಂಬ. ಮಗಳು ಕೀಳು ಜಾತಿಯವನನ್ನು ಮದುವೆ ಆದಳು ಅಂತ ಅವರ ತಾಯಿ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರಂತೆ! ಅಂತ್ಯಕ್ರಿಯೆಗೆ ಅಂತ ಊರಿಗೆ ಹೋಗಿದ್ದ ಅಮ್ಮನಿಗೆ ಅವರ ಅಣ್ಣ ತಮ್ಮಂದಿರು ಅವಮಾನ ಮಾಡಿ ಕಳಿಸಿದರಂತೆ. ತಾಯಿ ಮುಖ ನೋಡೋಕು ಬಿಡಲಿಲ್ಲವಂತೆ. ಆಮೇಲೆ ಅಮ್ಮ ಅಂತರ್ಮುಖಿ ಆಗಿಬಿಟ್ಟರು. ಅವರು